1550 (2210) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪರಿವೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳೆಷ್ಟು, (ಐ ಬಿ ಮತ್ತು ಟಿ ಬಿ) (ಜಿಲ್ಲಾವಾರು ವಿವರಗಳನ್ನು ಒದಗಿಸುವುದು),

ಆ) ಎಲ್ಲಾ ಅತಿಥಿಗೃಹಗಳ ಸಮರ್ಪಕ ನಿರ್ವಹಣೆಗೆ ಸೂಕ್ತ ಸಿಬ್ಬಂದಿ ನೇಮಕವಾಗಿದೆಯೇ,

ಇ) ಹಾಗಿಲ್ಲದಿದ್ದಲ್ಲಿ, ಯಾವ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ,

ಈ) ಇವುಗಳಿಂದ ಬರುವ ವಾರ್ಷಿಕ ಆದಾಯ ಎಷ್ಟು ಹಾಗೂ ಇವುಗಳ ನಿರ್ವಹಣೆಗೆ ಮತ್ತು ಸಿಬ್ಬಂದಿಗಳಿಗಾಗಿ ಖರ್ಚಾಗಿರುವ ಹಣ ಎಷ್ಟು,

ಉ) ಇಲ್ಲಿರುವ ಸಿಬ್ಬಂದಿಗಳೆಲ್ಲಾ ಖಾಯಂ ನೌಕರರೇ ಅಥವಾ ದಿನಗೂಲಿ ನೌಕರರೆ ದಿನಗೂಲಿಗಳಾಗಿದ್ದಲ್ಲಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ, ಇವರುಗಳನ್ನು ಖಾಯಂಮಾತಿ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂದನ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು

ಪರಿವೀಕ್ಷಣ ಮಂದಿರಗಳು	–	231
ಪ್ರವಾಸಿ ಮಂದಿರಗಳು	–	150
ಒಟ್ಟು	–	**381**

ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ

ಕ್ರ ಸಂ	ಜಿಲ್ಲೆ	ಐ ಬಿ	ಟಿ ಬಿ	ಒಟ್ಟು
1	ಬೆಂಗಳೂರು ನಗರ	1	–	1
2	ಬೆಂಗಳೂರು ಗ್ರಾಮಾಂತರ	12	2	14
3	ತುಮಕೂರು	7	6	13
4	ಕೋಲಾರ	13	–	13
5	ಮೈಸೂರು	8	1	9
6	ಚಾಮರಾಜನಗರ	5	5	10
7	ಮಂಡ್ಯ	–	9	9
8	ಶಿವಮೊಗ್ಗ	7	5	12
9	ದಾವಣಗೆರೆ	–	9	9
10	ಚಿತ್ರದುರ್ಗ	–	11	11
11	ಹಾಸನ	12	2	14
12	ಚಿಕ್ಕಮಗಳೂರು	–	11	11
13	ದಕ್ಷಿಣ ಕನ್ನಡ	7	–	7
14	ಉಡುಪಿ	6	–	6
15	ಕೊಡಗು	10	–	10
16	ಧಾರವಾಡ	4	6	10
17	ಗದಗ	4	11	15

18	ಹಾವೇರಿ	17	6	23
19	ಉತ್ತರ ಕನ್ನಡ	24	1	25
20	ಬೆಳಗಾವಿ	23	10	33
21	ಬಿಜಾಪುರ	15	1	16
22	ಬಾಗಲಕೋಟೆ	4	13	17
23	ಬಳ್ಳಾರಿ	11	5	16
24	ರಾಯಚೂರು	2	19	21
25	ಕೊಪ್ಪಳ	5	8	13
26	ಗುಲ್ಬರ್ಗಾ	16	5	21
27	ಬೀದರ್	18	4	22
	ಒಟ್ಟು	**231**	**150**	**381**

ಆ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರದ ಎಲ್ಲಾ ಅತಿಥಿಗೃಹಗಳಲ್ಲಿ ನಿರ್ವಹಣೆಗೆ ಮಂಜೂರಾದ ಹುದ್ದೆಗಳಿಂದ ಹಾಗೂ ಸೂಪರ್ ನ್ಯೂಮರರಿ (1–7– 84 ಕ್ಕಿಂತ ಮೊದಲು ಸೇರಿಕೊಂಡವರು) ಮತ್ತು ದಿನಗೂಲಿಯಲ್ಲಿರುವ (1–7–84 ರ ನಂತರ ಸೇರಿಕೊಂಡವರು) ಸಿಬ್ಬಂದಿಯಿಂದ ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ

ಇ) ಮುಖ್ಯ ಹೋಬಳಿಕೇಂದ್ರ ಸ್ಥಾನಗಳಲ್ಲಿ ಐ ಬಿ ಮತ್ತು ಟಿ ಬಿಗಳಿದ್ದು, ಇವುಗಳ ನಿರ್ವಹಣೆಗೆ ಮಂಜೂರಾದ ಹುದ್ದೆಗಳಿಲ್ಲದೆ ಇರುವುದರಿಂದ ಈ ಕೊರತೆಯನ್ನು ಹಾಲಿ ದಿನಗೂಲಿ ಕಾರ್ಯಭೃತ ಸಿಬ್ಬಂದಿಯವರಿಂದ ಸೂಕ್ತ ಕಾರ್ಯ ವ್ಯವಸ್ಥೆ ಮುಖೇನ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

ಈ) ಪರಿವೀಕ್ಷಣಾ ಮಂದಿರ ಮತ್ತು ಪ್ರವಾಸಿ ಮಂದಿರಗಳಿಂದ ಬರುವ ವಾರ್ಷಿಕ ಆದಾಯ ಹಾಗೂ ಖರ್ಚು ಈ ಕೆಳಕಂಡಂತಿದೆ

	ಆದಾಯ ರೂ	ಖರ್ಚು ರೂ
ಪ್ರವಾಸಿ ಮಂದಿರ ಪರಿವೀಕ್ಷಣಾ ಮಂದಿರ	81,34,319 00	7,78,05,980 00

ಉ) ಇಲ್ಲಿರುವ ಸಿಬ್ಬಂದಿಗಳನ್ನು ಮಂಜೂರಾದ ಹುದ್ದೆಗಳಿಲ್ಲದ ಕೆಲವು ಕಡೆಗಳಲ್ಲಿ ಸೂಪರ್ ನ್ಯೂಮರರಿ ನೌಕರುಗಳಿಂದ ಹಾಗೂ 1–07–84 ರ ನಂತರ ನೇಮಕಗೊಂಡಿರುವ ದಿನಗೂಲಿ ನೌಕರುಗಳ ನೇಮಕ ಮಾಡಿಕೊಳ್ಳಲಾಗಿದೆ ದಿನಾಂಕ 1–07–84 ನಂತರ ದಿನಗೂಲಿ ನೌಕರರು ಖಾಯಂ ಮಾಡುವ ಪ್ರಸ್ತಾವನೆಗೆ ದಿನಾಂಕ 10–04–2006 ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ

1551 (1684) ಶ್ರೀ ವೀರಪ್ಪ ದೇವಪ್ಪ ಕೆಸರಟ್ಟಿ ಜಿ (ಕನಕಗಿರಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನಕಗಿರಿ ವಿಧಾನಸಭಾ ಮತಕ್ಷೇತ್ರದಲ್ಲಿ ಬರುವ ಸಿದ್ಧಾಪುರದಿಂದ ನಂದ್ಯಾಳ ಗ್ರಾಮದವರೆಗೆ ಹಾಗೂ ಹನಗವಾಳದಿಂದ ಚಳ್ಳರ ರಸ್ತೆಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು ಇಲ್ಲಿಯವರೆಗೂ ಕಾಮಗಾರಿಯನ್ನು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,?

ಆ) ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಈ ರಸ್ತೆಗಳ ಅಭಿವೃದ್ಧಿಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿದೆ

ಆ) ಸಿದ್ದಾಪುರ–ನಂದಿಹಾಳ ರಸ್ತೆಯ ಕಿಮೀ 24 00 ರಿಂದ 46 00 ರವರೆಗೆ ಒಟ್ಟು 22 00 ಕಿಮೀ ಉದ್ದವಿದ್ದು, ಈ ಪೈಕಿ 15 ಕಿಮೀ ಉದ್ದಕ್ಕೆ ಡಾಂಬರು